## ಭಯ ಹುಟ್ಟಿಸುವ ಕೆಲಸ ಮಾಧ್ಯಮಗಳದಲ್ಲ...

ಬೆಂಗಳೂರಿನ ಒಂದು ಹೋಟೆಲ್‌ನಲ್ಲಿ ಇತ್ತೀಚೆಗೆ ನಡೆದ ಸ್ಫೋಟ ಎಲ್ಲರಿಗೂ ಗೊತ್ತೇ ಇರುವ ಘಟನೆ. ನಿಜಕ್ಕೂ ಇದು ಆತಂಕ ಪಡಬೇಕಾದ ವಿಷಯವೇ ಸರಿ. ಕ್ಷಣಮಾತ್ರದಲ್ಲಿ ಮಿಂಚಿನಂತೆ ಎಲ್ಲಾ ಸುದ್ದಿ ವಾಹಿನಿಗಳು ಈ ದುಷ್ಕೃತ್ಯವನ್ನು ತಮ್ಮದೇ ರೀತಿಯಲ್ಲಿ ಪ್ರಸಾರ ಮಾಡಿ ಜನತೆಗೆ ಎಚ್ಚರಿಕೆ ನೀಡಿದ್ದು ಮೆಚ್ಚತಕ್ಕದ್ದೇ. ಆದರೆ, ಮರುದಿನದಿಂದ ಬೆಂಗಳೂರಿಗೆ ಶುರುವಾಯಿತು ಸ್ಫೋಟಗಳ ಸರಣಿ! 'ಕಂಟಕ ವಕ್ಕರಿಸಿಯೇ ಬಿಟ್ಟಿತಾ?', 'ಉಗ್ರರ ತವರೂರು ಆಯಿತೇ ರಾಜಧಾನಿ?', 'ಯಾವ ಕ್ಷಣದಲ್ಲಾದರೂ ಸಿಡಿಯಬಹುದೇ ಬಾಂಬ್...?' – ಹೀಗೆ 'ಉಗ್ರ' ಪದವನ್ನು ಬಿಡುಬೀಸಾಗಿ ಭಯ ಹುಟ್ಟಿಸುವಂತೆ ಬಳಸಿದ್ದು ಬೇಸರ ತರಿಸಿತು.

—ಆರ್. ವೀರೇಶ್ ಕುಮಾರ್, ಬೆಂಗಳೂರು



## ನಾಯಕನೋ? ಖಳನಾಯಕನೋ?

ಕಲರ್ಸ್ ಕನ್ನಡದಲ್ಲಿ ಪ್ರಸಾರವಾಗುತ್ತಿರುವ 'ಕರಿಮಣಿ' ಧಾರಾವಾಹಿಯಲ್ಲಿ ನಾಯಕನ ಗುಣಗಳು ಖಳನಾಯಕನಿಗೆ ತಕ್ಕುದಾಗಿ ಇವೆ. ತನ್ನ ತಾಯಿಗೆ ಆದ ಸಣ್ಣ ತೊಂದರೆಗೆ ಕಾರಣ ಆದವರನ್ನು ಹಿಗ್ಗಾಮಗ್ಗ ಥಳಿಸುತ್ತಾನೆ. ಸ್ನೇಹಿತನ ಪ್ರೇಮ ಪ್ರಕರಣ ನೆಪವಾಗಿಟ್ಟುಕೊಂಡು, ಮದುವೆ ಮಂಟಪಕ್ಕೆ ನುಗ್ಗಿ ಅಮಾಯಕ ಹುಡುಗಿಯೊಬ್ಬಳ ಮದುವೆ ತಪ್ಪಿಸುತ್ತಾನೆ. ಖಳ ಗುಣಗಳ ವೈಭವೀಕರಣದ ಇಂಥ ವ್ಯಕ್ತಿಯನ್ನು ನಾಯಕ ಎನ್ನಬಹುದೆ?

—ಶರ್ಮಿಷ್ಠಾ ವೇದಗರ್ಭ

ವಾರದ ಪತ್ರ

## ಓದುವ ಸಂಸ್ಕೃತಿಗೆ 'ಪುಸ್ತಕ ದಿನ'ದ ರಂಗು

1995ರ ಏಪ್ರಿಲ್ 23ರಂದು 'ವಿಶ್ವ ಪುಸ್ತಕ ದಿನ'ದ ಆಚರಣೆ ಆರಂಭವಾಯಿತು. ಈಗ ಪ್ರತಿ ವರ್ಷವೂ ಏಪ್ರಿಲ್ 23ರಂದು ಪುಸ್ತಕ ದಿನವನ್ನು ಆಚರಿಸಲಾಗುತ್ತದೆ. ಪುಸ್ತಕ ಓದುವುದು ಕೆಲವರಿಗೆ ಹವ್ಯಾಸ. ಮತ್ತೆ ಕೆಲವರಿಗೆ ಜ್ಞಾನವೃದ್ಧಿಗಿರುವ ದಾರಿ. ಪುಸ್ತಕ ಓದುವುದರಿಂದ ನಮ್ಮ ಕಲ್ಪನಾಶಕ್ತಿ ಹೆಚ್ಚುವುದರ ಜೊತೆಗೆ ಮನೋವಿಕಾಸಕ್ಕೆ ನೆರವಾಗುತ್ತದೆ ಮತ್ತು ವಿವಿಧ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಯ ಪರಿಚಯವಾಗುತ್ತದೆ.

ಜನ ಮೆಚ್ಚಿದ 'ಬೊಂಬಾಟ್ ಭೋಜನ' ಕಾರ್ಯಕ್ರಮದಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮದ ನಿರೂಪಕ ನಾ. ಸೋಮೇಶ್ವರ ಪುಸ್ತಕದ ಮಹತ್ವ ಮತ್ತು ಓದಿನ ಮಹತ್ವ ತಿಳಿಸಿದರು. ನಾವೂ ನಮ್ಮ ಬಾಲ್ಯದಲ್ಲಿ ಚಂದಮಾಮ', 'ಬಾಲಮಿತ್ರ' ಓದುತ್ತಾ ಬೆಳೆದವರು. ಅದನ್ನು ನೆನಪಿಸಿದ್ದು ಖುಷಿ ಆಯಿತು. ಓದುವ ಅಭ್ಯಾಸ ಬೆಳೆಸುವಲ್ಲಿ ಪೋಷಕರ ಪಾತ್ರ ತುಂಬಾ ಮುಖ್ಯ. ಮನೆಗೆ ದಿನಪತ್ರಿಕೆ, ವಾರಪತ್ರಿಕೆಗಳನ್ನು ತೋರಿಸಿ ಮಕ್ಕಳಿಗೆ ಓದುವ ಹವ್ಯಾಸ ಬೆಳೆಸಬೇಕು.

—ವೀಣಾ ಶಂಕರ್, ಬೆಂಗಳೂರು

## ಪೌರ ಕಾರ್ಮಿಕರಿಗೆ ಸತ್ಕಾರ

ಇಷ್ಟು ದಿನ ನೀರಸವಾಗಿ, ಸಪ್ಪೆಯಾಗಿದ್ದ ಅಡುಗೆಗೆ ಮಸಾಲೆ ಸೇರಿಸಿ ಭೂರಿ ಭೋಜನವನ್ನೇ ಉಣ ಬಡಿಸಿದ್ದಾರೆ ಕಲರ್ಸ್ ಕನ್ನಡದ 'ಬೃಂದಾವನ'ದವರು. ಮೊನ್ನೆಯ ಸಂಚಿಕೆಯಲ್ಲಿ ರಸ್ತೆ ಸ್ವಚ್ಛತೆ ಮಾಡುವವರ ಬಗ್ಗೆ ಒಂದು ಉತ್ತಮ ಸಂದೇಶವನ್ನು ನೀಡಿರುವುದು ಮನೋಜ್ಞವಾಗಿದೆ. ಅವರನ್ನು ಕೀಳಾಗಿ ಕಾಣುವುದು ತಪ್ಪು ಎನ್ನುವುದನ್ನು ಪ್ರತಿಪಾದಿಸಿದ್ದಾರೆ. ಅಲ್ಲದೆ ಅವರನ್ನು ಮನೆಗೆ ಕರೆದು, ಹಬ್ಬದೂಟವನ್ನು ಬಡಿಸಿ, ತಾಂಬೂಲವನ್ನು ಕೊಟ್ಟು ಬೀಳ್ಕೊಡುತ್ತಾರೆ. ಅವರೇನಾದರೂ ನಾಲ್ಕಾರು ದಿನ ಮುಷ್ಕರ ಮಾಡಿದರೆ ನಮ್ಮ ಅವಸ್ಥೆ ನಾಯಿಗೂ ಬೇಡ. ಇದು ನಗರವಾಸಿಗಳೆಲ್ಲರಿಗೂ ಅನುಭವ ವೇದ್ಯ. ಹೀಗಿರುವಾಗ ಅವರ ಕೆಲಸಕ್ಕೆ ಗೌರವ ಕೊಡಬೇಕಾದದ್ದು ನಮ್ಮೆಲ್ಲರ ಕರ್ತವ್ಯ.

– ಎನ್. ಕೃಷ್ಣಮೂರ್ತಿ ರಾವ್

## 'ಮಂಗಳ'ಕರ ಶುಭೋದಯ

ಚಂದನ ವಾಹಿನಿಯ 'ಶುಭೋದಯ ಕರ್ನಾಟಕ' ಕಾರ್ಯಕ್ರಮದಲ್ಲಿ ಪ್ರಸಾರವಾದ ಹೆಸರಾಂತ ರಂಗಕರ್ಮಿ ಮಂಗಳಾ ರಘು ಅವರ ಸಂದರ್ಶನ ಪ್ರೌಢವಾಗಿತ್ತು. ಅವರ 'ರಂಗಾಯಣ'ದ ಒಡನಾಟ, ನಂತರದ 'ಸಂಚಾರಿ' ನಂಟು ಮತ್ತು ಅವರ ಮಕ್ಕಳಿಗೆ ರಂಗಭೂಮಿಯ ಪರಿಚಯ ಎಲ್ಲವೂ ಅತ್ಯಂತ ಸೊಗಸಾಗಿ ಮೂಡಿಬಂತು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

'ಶುಭೋದಯ'ದಲ್ಲಿ ಪ್ರಸಾರವಾದ ಚಿಕ್ಕಬಳ್ಳಾಪುರದ ರೈತ ಮಹಿಳೆ ಗೌರಮ್ಮ ಚೆನ್ನಾಗಿತ್ತು. ಕೃಷಿ ಕುಟುಂಬದ ಅನೇಕ ಆಯಾಮಗಳ ಪರಿಚಯ ಆಯಿತು. 'ಶಾಲಾ ಮಕ್ಕಳ ವಾರ್ಷಿಕ ಪ್ರವಾಸ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಹೊಲ–ಗದ್ದೆ, ರೈತ ಕುಟುಂಬಗಳ ಪರಿಚಯ ಮಾಡಿಸಬೇಕು' ಎಂದು ಗೌರಮ್ಮ ಹೇಳಿದ ಮಾತು ತುಂಬ ಪ್ರಸ್ತುತ ಎಂದು ಅನಿಸಿತು. ಇಂದಿನ ಯಾಂತ್ರಿಕ ಶಿಕ್ಷಣ ಯುಗದಲ್ಲಿ ಮಕ್ಕಳಿಗೆ ಇದು ಅಗತ್ಯವಾಗಿದೆ.

—ಕಮಲಾದೇವಿ ರಾಜಶೇಖರ ಹಳ್ಳೂರ್

'ಶುಭೋದಯ' ಪ್ರತಿಯೊಬ್ಬರೂ ನೋಡಲೇಬೇಕಾದಂತಹ ಕಾರ್ಯಕ್ರಮ. ಈಚೆಗೆ ಅದರಲ್ಲಿ ಪ್ರಥಮ ಚಿಕಿತ್ಸೆಯ ಪರಿಚಯವನ್ನು ತಜ್ಞರು ಮಾಡಿಕೊಟ್ಟರು. ಹಾವು ಕಚ್ಚಿದಾಗ, ನೀರಿಗೆ ಬಿದ್ದರೆ, ಆಪತ್ತಿನಲ್ಲಿ ಸಿಲುಕಿದವರ ರಕ್ಷಣೆಗೆ ತುಂಬ ಮಹತ್ವದ ಟಿಪ್ಸ್ ನೀಡಿದರು. ಸಿನಿಮಾ–ಧಾರಾವಾಹಿಗಳಲ್ಲಿ ತೋರಿಸುವಂತೆ ಪ್ರಜ್ಞೆ ತಪ್ಪಿದವರಿಗೆ ನೀರು ಕುಡಿಸುವುದು, ಹಾವು ಕಚ್ಚಿದರೆ ಬಟ್ಟೆ ಕಟ್ಟುವುದು, ನೀರಲ್ಲಿ ಬಿದ್ದವರನ್ನು ಅಂಗಾತ ಮಲಗಿಸಿ ನೀರು ತೆಗೆಯಬಾರದು ಎಂಬ ಎಚ್ಚರಿಕೆಯನ್ನೂ ನೀಡಿದರು.

—ಎ.ಪಿ. ರೇಣುಕಾ, ಮೈಸೂರು

## ಸಂಗೀತ ಸುಧೆಯುಣಿಸಿದ ಅಮೂಲ್ಯ

ಝೀ ಕನ್ನಡದ 'ಸರಿಗಮಪ' ರಿಯಾಲಿಟಿ ಶೋನಲ್ಲಿ ಮೈಸೂರಿನ ಅಮೂಲ್ಯ 'ನಾ ನಿನ್ನ ಬಿಡಲಾರೆ' ಸಿನಿಮಾದ 'ರಾಘವೇಂದ್ರ ನೀ ಮೌನವಾದರೆ ನನ್ನ ಗತಿ ಏನು?' ಎಂಬ ಗೀತೆಯನ್ನು ಶ್ರುತಿ ಬದ್ಧವಾಗಿ, ಸುಶ್ರಾವ್ಯವಾಗಿ, ತಲ್ಲೀನತೆಯಿಂದ ಹಾಡಿದರು. ವಾದ್ಯಗಳ ಹಿನ್ನೆಲೆ ಕೂಡ ಗಾನಮಾಧುರ್ಯಕ್ಕೆ ಉತ್ತಮ ಸಾಥ್ ನೀಡಿತು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಝೀ ಕನ್ನಡದ 'ಸರಿಗಮಪ'ದಲ್ಲಿ ಐವರು ಗಾಯಕರು ಫೈನಲ್‌ಗೆ ಆಯ್ಕೆಯಾಗಿದ್ದಾರೆ. ಕುರಿ ಕಾಯುವ ಕಾಯಕ ಮಾಡಿಕೊಂಡು, ಸ್ವಯಂ ಪ್ರಯತ್ನದಿಂದ ಹಾಡುವುದನ್ನು ಕಲಿತಿರುವ ರಮೇಶ್ ಲಮಾಣಿ ಅಂತಿಮ ಸುತ್ತಿಗೆ ಆಯ್ಕೆಯಾಗಿರುವುದು ವಿಶೇಷ.

—ಭಾರತೀ ಗಂಗಾಧರ್ ಬೆಂಗಳೂರು